## ಪ್ರಧಾನ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಅಥಣಿ

---

ಸಿ.ಸಿ.ನಂ : **2264/2017** ದಿನಾಂಕ : **10.01.2024**
ಸಿ. ಡಬ್ಲೂ : **6**
ಪಿಡಬ್ಲೂ : **6**

---

| | | |
|---|---|---|
| ಸಾಕ್ಷಿದಾರರ ಹೆಸರು | : | ಕಸ್ತೂರಿ ಮಹಾದೇವ ಪೂಜಾರಿ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಶೇತ್ಕಿ |
| ವಾಸಸ್ಥಳ | : | ಶಿವನೂರು |
| ದಿನಾಂಕ | : | 10.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

---

* * *

<u>ಮುಖ್ಯ ವಿಚಾರಣೆ ಸ.ಸ.ಅ. ವಕೀಲರವರಿಂದಃ</u>

ನನಗೆ ಚಾಸಾ 1, 4, 5, 7, 8 ಮತ್ತು ಅರೋಪಿತರ ಪರಿಚಯ ಇರುತ್ತದೆ. ಈಗ್ಗೆ 5 ವರ್ಷಗಳ ಹಿಂದೆ ನಾನು, ಚಾಸಾ 7, ಚಾಸಾ1 ರವರ ಮನೆಯ ಬಳಿ ಇದ್ದೆವು. ಆಗ ಆರೋಪಿತರು ಬಂದು 2 ಮೋಟಾರ ಗಳನ್ನು ಮತ್ತು ಪೈಪಗಳನ್ನು ಬಾವಿಯಲ್ಲಿ ಒಗೆದಿರುತ್ತಾರೆ. ಆರೋಪಿತರು ಚಾಸಾ 1 ರವರಿಗೆ ಬೈದಾಡಿರುತ್ತಾರೆ. ಆರೋಪಿತರು ದಂಡಿಗೆ ಮಾಡಿರುತ್ತಾರೆ. ಚಾಸಾ 1 ರವರು ದೂರು ನೀಡಿರುತ್ತಾರೆ. ಚಾಸಾ 1 ರವರಿಗೆ ರೂ. 40 ಸಾವಿರದಷ್ಟು ನಷ್ಟವಾಗಿರುತ್ತದೆ. ಚಾಸಾ 1 ರವರ ತೊಗರಿ ಮತ್ತು ಜೋಳ ನಷ್ಟವಾಗಿರುತ್ತದೆ. ನನಗೆ ಇಷ್ಟೆ ಗೊತ್ತಿರುತ್ತದೆ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ವಕೀಲರವರಿಂದಃ</u>

ಆರೋಪಿತರು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಇನ್ನೊಂದು ಸಾರಿ ಜಮೀನಿಗೆ ಬಂದಲ್ಲಿ ಮೋಟಾರನ್ನು ಬಾವಿಯಲ್ಲಿ ಒಗೆದ ಹಾಗೆ ನಿಮ್ಮನ್ನು ಬಾವಿಯಲ್ಲಿ ಒಗೆದು ಕೊಲೆ ಮಾಡುತ್ತೇವೆ ಅಂತಾ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ . ಘಟನೆಯ ದಿನಾಂಕ 19.07.2017 ರಂದು ಮುಂಜಾನೆ 11.00 ಗಂಟೆಗೆ ಆಗಿರುತ್ತದೆ ಎಂದರೆ ಸರಿ .

<u>ಪಾಟೀ ಸವಾಲುಃ</u> ಆರೋಪಿತರ ಪರವಾಗಿ ಶ್ರೀ ಎಮ್ ಡಿ ಕೆ ವಕೀಲರಿಂದಃ

ಘಟನೆ ನಡೆದಾಗ ನಾನು ಮನೆಯ ಬಳಿ ಇದ್ದೆನು. ಮನೆಗೂ ಮತ್ತು ಬಾವಿಗೂ ಸ್ವಲ್ಪ ದೂರವಿರುತ್ತದೆ. ಘಟನಾ ಸ್ಥಳದಲ್ಲಿ ಕಡಲೆ , ಜೋಳ ಮತ್ತು ತೊಗರಿ ಬೆಳೆ ಇದ್ದವು. ಆರೋಪಿತರ ಮನೆಗಳು ಬೇರೆ ಕಡೆ ಇರುತ್ತವೆ. ಘಟನೆಯು ಯಾವ ದಿನಾಂಕದಂದು ಆಗಿದೆ ಅಂತಾ ನನಗೆ ಗೊತ್ತಿಲ್ಲ. ಘಟನಾ ಸ್ಥಳದ ಸ. ನಂ ನನಗೆ ಗೊತ್ತಿಲ್ಲ. ಘಟನಾ ಸ್ಥಳದ ಜಮೀನಿನ ಬಳಿ ಬೇರೆ ಜಮೀನುಗಳು ಸಹ ಇರುತ್ತವೆ. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು ದೂರದಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ಚಾಸಾ 1 ನನ್ನ ಮಗ ಇರುತ್ತಾರೆ. ನಿಮ್ಮ ಮನೆಯಿಂದ ನಿಂತು ನೋಡಿದರೆ ಘಟನಾ ಸ್ಥಳದಲ್ಲಿ ಏನಾಗಿತ್ತು ಅಂತಾ ಕಾಣುವುದಿಲ್ಲ ಎಂದರೆ ಸರಿಯಲ್ಲ. ಮೋಟಾರ ಗಳನ್ನು 5 ರಿಂದ 8 ನೇ ಆರೋಪಿತರು ಬಾವಿಯಲ್ಲಿ ನೂಕಿರುತ್ತಾರೆ. ನಿಮ್ಮ ಮತ್ತು ಆರೋಪಿತರ ನಡುವೆ ಮೊದಲಿನಿಂದಲೂ ಜಮೀನಿನ ಕುರಿತು ತಂಟೆ ಇರುತ್ತದೆ ಎಂದರೆ ಸರಿಯಲ್ಲ. ಆ ಬಗ್ಗೆ ನನ್ನ ಹೇಳಿಕೆಯಲ್ಲಿ ಬರೆದ ಕುರಿತು ನನಗೆ ಗೊತ್ತಿಲ್ಲ. ನನ್ನ ಹೇಳಿಕೆಯನ್ನು ಯಾರು ಹೇಳಿ ಬರೆಸಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ , ಕಾರಣ ನಾನು ಶಾಲೆ ಕಲಿತಿರುವುದಿಲ್ಲ. ಆರೋಪಿತರು ಯಾವುದೇ ಮೋಟಾರು ಪೈಪನ್ನು ಎಸೆದಿಲ್ಲ , ಚಾಸಾ1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಯಾವುದೇ ಪ್ರಾಣ ಬೆದರಿಕೆ ಹಾಕಿ , ನಷ್ಟ ರೂ. 40 ಸಾವಿರ ಮತ್ತು ರೂ. 1 ಸಾವಿರ ಉಂಟು ಮಾಡಿಲ್ಲ

ಎಂದರೆ ಸರಿಯಲ್ಲ.  ಘಟನೆ ನಡೆದಾಗ ಅಕ್ಕಪಕ್ಕದವರು ಯಾರು ಜಗಳ ಬಿಡಿಸಲು ಬರಲಿಲ್ಲ, ನಾವು ಮಾತ್ರ ಸ್ಥಳದಲ್ಲಿದ್ದೆವು. ನೀವು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.  ಹೇಳಿಕೆಯನ್ನು ಎಲ್ಲಿ ನೀಡಿರುತ್ತೇನೆ ಅಂತಾ ನನಗೆ ಗೊತ್ತಿಲ್ಲ. ಆರೋಪಿತರು ಯಾವುದೇ ಕೃತ್ಯ ಎಸಗಿಲ್ಲ ಎಂದರೆ ಸರಿಯಲ್ಲ. ಚಾಸಾ1 ನಿಮ್ಮ ಮಗ ಆಗಿದ್ದರಿಂದ , ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

(ಜಗದೀಶ ಬಿಸೇರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ